## ದಿನಾಂಕ:27-11-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

**ವಿಷಯದ ಸಂಖ್ಯೆ: 6 (149)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಿ.ಪಿ.ಪಿ. (PPP-Public Private Partnership) ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ವ್ಯಾಪ್ತಿಯಲ್ಲಿ ಸ್ವಯಂ ಚಾಲಿತ ಬಹುಮಹಡಿ ಕಟ್ಟಡದ ಕಾರ್ ಪಾರ್ಕಿಂಗ್ ನಿರ್ಮಾಣ ಮಾಡಲು ಕೋರಿ ಕಳೆದ ದಶಕದಲ್ಲಿ ಬೆಂಗಳೂರು ನಗರದಲ್ಲಿ ಶರವೇಗದಲ್ಲಿ ಬೆಳೆಯುತ್ತಿರುವ ವಾಹನ ಸಾಂದ್ರತೆಗೆ ಅನುಗುಣವಾಗಿ ಯೋಜನಾ ಬದ್ಧವಾದ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡುವುದು ಅತ್ಯವಶ್ಯವಾಗಿರುತ್ತದೆ. ಅನೇಕ ಪ್ರಮುಖ ರಸ್ತೆಗಳು ಯಾವುದೇ ಶುಲ್ಕವನ್ನು ನೀಡದೆ ರಸ್ತೆ ಬದಿ ಪಾರ್ಕಿಂಗ್ ಅನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಈ ಕಾರಣದಿಂದ ರಸ್ತೆ ಪಥಗಳು ಗಣನೀಯವಾಗಿ ಕಡಿಮೆಯಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಅಲ್ಲದೆ, ಕೆಲವು ಏಕಮುಖ/ದ್ವಿಮುಖ ಸಂಚಾರ ಮಾರ್ಗಗಳಲ್ಲಿ ಕಾರ್ ಪಾರ್ಕಿಂಗ್‌ಗೆ ಅವಕಾಶ ಮಾಡಿಕೊಟ್ಟಿರುವುದರಿಂದ ನಗರದ ಬ್ಯುಸಿ ರಸ್ತೆಗಳಲ್ಲಿನ ಸುಗಮ ಸಂಚಾರಕ್ಕಿರುವ ರಸ್ತೆಯ ಸಾಮರ್ಥ್ಯವೇ ಕಡಿಮೆಯಾಗುತ್ತಿದೆ. ಈ ರೀತಿಯ ರಸ್ತೆ ಬದಿಯ ಪಾರ್ಕಿಂಗ್‌ನಿಂದಾಗಿ, ಅಲ್ಲಲ್ಲೇ ನಿಲ್ಲುವ ವಾಹನಗಳಿಂದ ವಾಹನಗಳು ಹಿಂದೆ ಮುಂದೆ ಚಲಿಸಲಾಗದೆ ಅಸ್ತವ್ಯಸ್ತವಾಗುತ್ತಿರುವುದನ್ನು ಕಾಣಬಹುದಾಗಿದೆ.

ಒಂದು ಅಧ್ಯಾಯನ ಪ್ರಕಾರ ಒಂದು ವರ್ಷದಲ್ಲಿ 8760 ಗಂಟೆಗಳಲ್ಲಿ ಕಾರ್‌ಗಳು ಚಲಿಸುವುದು ಕೇವಲ 400 ಗಂಟೆಗಳು ಮಾತ್ರ, ಉಳಿದ 8360 ಗಂಟೆಗಳು ಪಾರ್ಕಿಂಗ್‌ಗೆ ಮೀಸಲು ಎಂದು ಅಂದಾಜಿಸಲಾಗಿದೆ. ಪ್ರತಿಯೊಬ್ಬ ಕಾರ್ ಮಾಲೀಕನೂ ಸಹ ತನ್ನ ಕಾರ್‌ನ್ನು ತನ್ನ ಕಛೇರಿ/ಮನೆಗೆ ಹತ್ತಿರವಿರುವ ಸ್ಥಳದಲ್ಲಿ ಪಾರ್ಕ್ ಮಾಡಲು ಇಚ್ಛಿಸುತ್ತಾನೆ. ಇದರಿಂದ ಅವನ ನಡಿಗೆಯ ಸಮಯ ಕಡಿಮೆಯಾಗುತ್ತದೆ. ಈ ಕಾರಣಗಳಿಂದಾಗಿ CBD ಮತ್ತು ಇತರೆ ವಾಣಿಜ್ಯ ಪ್ರದೇಶಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯು ಹೆಚ್ಚಿನ ಬೇಡಿಕೆಯನ್ನು ಪಡೆಯುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರಸ್ತೆ ಮತ್ತು ಸಾರಿಗೆ ಅಂತರ್ಜಾಲವನ್ನು ಅಭಿವೃದ್ಧಿಪಡಿಸುವ ಒಂದು ಪ್ರಮುಖ ಕಾರ್ಯ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತದೆ. ಅದರಲ್ಲಿ ಕಾರ್ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡುವುದು ಒಂದು ಪ್ರಮುಖ ಹಾಗೂ ಗಂಭೀರ ವಿಷಯವಾಗಿದೆ.

ಬೆಂಗಳೂರು ನಗರದಲ್ಲಿ ರಸ್ತೆ ಬದಿಯ ವಾಹನ ನಿಲುಗಡೆ ಪ್ರದೇಶವು ಕಡಿಮೆಯಿರುವುದರಿಂದ, ಆಯ್ದ ಸ್ಥಳಗಳ ನಿಗಧಿತ ಪ್ರದೇಶದ ವಿಸ್ತೀರ್ಣ ಕಡಿಮೆ ಇರುವ ಸಮಸ್ಯೆವಿರುವುದರಿಂದ, ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗದಿರುವುದರಿಂದ, ಪ್ರತಿಯೊಬ್ಬ ವ್ಯಕ್ತಿಯೂ ತಮಗೆ ಸಮೀಪದ ಸ್ಥಳದಲ್ಲಿ ಕಾರ್ ಪಾರ್ಕಿಂಗ್ ಮಾಡಲು ಬಯಸುತ್ತಾನೆ. ಮತ್ತೊಂದು ಪರಿಹಾರವಾಗಿ ಬಹು ಮಹಡಿ ವಾಹನ ನಿಲ್ದಾಣ ವ್ಯವಸ್ಥೆಯನ್ನು ಜೆ.ಸಿ.ರಸ್ತೆ, ಕೆ.ಜಿ.ರಸ್ತೆ ಮುಂತಾದ ಸ್ಥಳಗಳಲ್ಲಿ ಕಲ್ಪಿಸಲಾಗಿದೆ. ಈ ರೀತಿ ಕಲ್ಪಿಸಿದ್ದರೂ ಸಹ ಸತತವಾಗಿ ಹೆಚ್ಚುತ್ತಿರುವ ವಾಹನ ಸಾಂದ್ರತೆಯಿಂದಾಗಿ ಈ ವ್ಯವಸ್ಥೆಯೂ ಕೂಡ ಕಡಿಮೆಯೆನಿಸಿದೆ.

ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವಿವಿಧ ಸ್ಥಳಗಳಲ್ಲಿ ಸ್ವಯಂಚಾಲಿತ ಬಹುಮಹಡಿ ಕಾರ್ ಪಾರ್ಕಿಂಗ್ ವ್ಯವಸ್ಥೆಯನ್ನು ಪಿ.ಪಿ.ಪಿ. ಅಡಿಯಲ್ಲಿ ಮಾದರಿ ಯೋಜನೆಯನ್ನಾಗಿ (Pilot Project) ಕೈಗೆತ್ತಿಕೊಳ್ಳಲು ಹಾಗೂ ಈ ಮೂಲಕ ರಸ್ತೆ ಬದಿಯ ಕಾರ್ ಪಾರ್ಕಿಂಗ್ ವ್ಯವಸ್ಥೆಯನ್ನು ತೆಗೆದುಹಾಕಲು ಉದ್ದೇಶಿಸಿದೆ. ಈ ಸ್ವಯಂಚಾಲಿತ ಬಹುಮಹಡಿ ಕಾರ್ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಿದಲ್ಲಿ ಕಡಿಮೆ ಸ್ಥಳಾವಕಾಶವನ್ನು ಉಪಯೋಗಿಸಿದಂತಾಗುತ್ತದೆ. ಉದಾ: (20x30) ಅಡಿಗಳುಳ್ಳ ಪ್ರದೇಶದಲ್ಲಿ ಸುಮಾರು:40 ಕಾರುಗಳನ್ನು ನಿಲ್ಲಿಸಲು ಅವಕಾಶವನ್ನು ಕಲ್ಪಿಸಬಹುದಾಗಿರುತ್ತದೆ. ಆದ್ದರಿಂದ, ಸ್ವಯಂಚಾಲಿತ ಬಹುಮಹಡಿ ಕಾರ್ ಪಾರ್ಕಿಂಗ್ ವ್ಯವಸ್ಥೆಯನ್ನು ಪಿ.ಪಿ.ಪಿ ಯೋಜನೆಯಲ್ಲಿ ಕೈಗೆತ್ತಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಸ್ಥಳಗಳಲ್ಲಿ ಮೊದಲನೇ ಹಂತದಲ್ಲಿ ಸದರಿ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.

1) ಮೆಜಿಸ್ಟಿಕ್ – ಸುಖ್ ಸಾಗರ್ ಹೋಟೆಲ್ ಎದುರು (ಗಾಂಧಿನಗರ)
2) ಉಪ್ಪಾರಪೇಟೆ ಪೊಲೀಸ್ ಠಾಣೆ ಎದುರು
3) ಶೇಷಾದ್ರಿ ರಸ್ತೆ (ರೇಸ್ ಕೋರ್ಸ್ ಜಂಕ್ಷನ್ ಬಳಿ)
4) ಸ್ವಾತಂತ್ರ್ಯ ಉದ್ಯಾನವನ
5) ರೇಸ್ ಕೋರ್ಸ್ ರಸ್ತೆ
6) ರಸೆಲ್ ಮಾರುಕಟ್ಟೆ
7) ಕಮರ್ಷಿಯಲ್ ಸ್ಟ್ರೀಟ್
8) ಡಿಕನ್ಸನ್ ರಸ್ತೆ
9) ರೆಸಿಡೆನ್ಸಿ ರಸ್ತೆ
10) ಕೋರಮಂಗಲ 80 ಅಡಿ ರಸ್ತೆ
11) ಕೋರಮಂಗಲ (ಫೋರಂ ಮಾಲ್ ಎದುರು, ರಹೇಜ ಎದುರು)
12) ದೊಮ್ಮಲೂರು ಬಳಿ
13) ಸಿಂಪೋನಿ ಚಿತ್ರಮಂದಿರದ ಎದುರು
14) ಬಸವನಗುಡಿ (ಗಾಂಧಿ ಬಜಾರ್ ಬಳಿ)
15) ನಗರಪಾಲಿಕೆ, ಕೇಂದ್ರ ಕಛೇರಿ ಎದುರು ಹಾಗೂ ಟೌನ್ ಹಾಲ್ ಹತ್ತಿರ
16) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿ ಆವರಣದ ಒಳಗೆ
17) ಹೊಸಮಠ ಆಸ್ಪತ್ರೆ ಎದುರು
18) ಮೆಕ್‌ಗ್ರಾತ್ ರಸ್ತೆ (SWD ಮೇಲೆ)
19) ಸಿಲ್ವರ್ ಜ್ಯುಬಿಲಿ ಪಾರ್ಕ್ ರಸ್ತೆ
20) ಮಂತ್ರಿ ಮಾಲ್ ಬಳಿ
21) ಅಕ್ಕಿತಿಮ್ಮನಹಳ್ಳಿ ಹಾಕಿ ಕ್ರೀಡಾಂಗಣದ ಬಳಿ
22) ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ
23) ಕೆ.ಹೆಚ್.ರಸ್ತೆ/ಜೋಡಿ ರಸ್ತೆ ಬಳಿ
24) ಲಾಲ್‌ಬಾಗ್ ಬಳಿ
25) ಜಯದೇವ ಆಸ್ಪತ್ರೆ ಮತ್ತು ಡೈರಿ ವೃತ್ತದ ನಡುವೆ ಲಭ್ಯವಿರುವ ಸ್ಥಳದಲ್ಲಿ.

......................3

ಮೇಲ್ಕಂಡ 25 ಸ್ಥಳಗಳಲ್ಲಿ, ಮೊದಲನೇ ಹಂತದಲ್ಲಿ ಪಿ.ಪಿ.ಪಿ. ಯಡಿಯಲ್ಲಿನ ಮಾದರಿ ಯೋಜನೆಯಡಿಯಲ್ಲಿ ಆಯ್ದ 5 ಸ್ಥಳಗಳಲ್ಲಿ ಮಾತ್ರ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯನ್ನು ಟ್ರಾಫಿಕ್ ಪೊಲೀಸ್ ಇಲಾಖೆಯ ಜಾಗೃತದಳದ ಸಹಕಾರದೊಂದಿಗೆ ಕೈಗೆತ್ತಿಕೊಂಡಲ್ಲಿ ರಸ್ತೆ ಬದಿಯ ಕಾರ್ ಪಾರ್ಕಿಂಗ್ ವ್ಯವಸ್ಥೆಯನ್ನು ನಿರ್ಮೂಲನ ಮಾಡಿ ವಾಹನ ಸಂಚಾರವನ್ನು ಸುಗಮವಾಗುವಂತೆ ಮಾಡಲು ಅವಕಾಶ ಮಾಡಿ ಕೊಟ್ಟಂತಾಗುತ್ತದೆ.

ಆದ್ದರಿಂದ, ಸ್ವಯಂ ಚಾಲಿತ ಬಹುಮಹಡಿ ಕಾರ್ ಪಾರ್ಕಿಂಗ್ ವ್ಯವಸ್ಥೆಯನ್ನು ಮೇಲಿನ ಸ್ಥಳಗಳಲ್ಲಿ ಆಯ್ದ 5 ಸ್ಥಳಗಳಲ್ಲಿ ಪಿ.ಪಿ.ಪಿ ಅಡಿಯಲ್ಲಿನ ಮಾದರಿ ಯೋಜನೆ ಹಾಗೂ ಈ ಯೋಜನೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ಕೈಗೊಳ್ಳಲು ಪ್ರತಿಷ್ಠಿತ ಸಂಸ್ಥೆಗಳಿಂದ ಆಸಕ್ತಿ ವಹಿಸುವಿಕೆಯನ್ನು (Request for Proposal) ಆಹ್ವಾನಿಸಲು ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ತದನಂತರ ಪಾಲಿಕೆಯ ಸಭೆಯ ತಾತ್ವಿಕ ಅನುಮೋದನೆಯನ್ನು ನೀಡುವಂತೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-11-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26-11-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:26-11-2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎನ್.ದಯಾನಂದ್)
ಉಪ ಮಹಾಪೌರರು